International Journal of Multidisciplinary Research and Development
Online ISSN: 2349-4182, Print ISSN: 2349-5979, Impact Factor: RJIF 5.72
www.allsubjectjournal.com
Volume 4; Issue 7; July 2017; Page No. 532-536

# ಪುಣ್ಯ ಕಾಶಿ ಶಿವ ಶರಣರ ಶ್ರೀ ಕ್ಷೇತ್ರ ಉಳವಿ

**ಡಾ.ಸಂಜೀವ ಆರ್.ನಾಯಕ.**

ಎಂ.ಎ. ಎಂ.ಫಿಲ್. ಪಿ.ಹೆಚ್.ಡಿ . ಡಿ.ಬಿ.ಎಸ್ ಸಹಾಯಕ ಪ್ರಾಧ್ಯಾಪಕರು ಕೆ.ಎಲ್.ಇ.ಸಂಸ್ಥೆ, ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ ಹಾವೇರಿ

## Introduction

**ಉತ್ತರ ಕನ್ನಡ ಜಿಲ್ಲೆಯ ಪುಣ್ಯಕ್ಷೇತ್ರಗಳಲ್ಲಿ ಪ್ರಕೃತಿ ಸೌಂದರ್ಯಗಳ ನಡುವೆ ನಿಂತಿರುವ ವೀರ ಶೈವ ಧರ್ಮದ ಪುಣ್ಯ ಸ್ಥಳ ಉಳವಿ.**

ಉತ್ತರ ಕನ್ನಡ ಜಿಲ್ಲೆಯ ಪುಣ್ಯಕ್ಷೇತ್ರಗಳಲ್ಲಿ ಪ್ರಕೃತಿ ಸೌಂದರ್ಯಗಳ ನಡುವೆ ನಿಂತಿರುವ ಸುಂದರ ಸ್ಥಳವೇ ಉಳವಿಯಾಗಿದೆ. ಜೋಯಿಡಾ ತಾಲೂಕಿನ ನಡುವಿನ ಭಾಗದಲ್ಲಿರುವ ಉಳವಿಯು 12 ನೇ ಶತಮಾನದ ಕ್ರಾಂತಿ ಕಾರಿ ಬಸವಣ್ಣನವರು ಕಲ್ಯಾಣವನ್ನು ತೊರೆದರು, ಕೂಡಲ ಸಂಗಮಕ್ಕೆ ತೆರಳಿದರು. ಶಿವಶರಣರು ಉಳವಿಯತ್ತ ಪ್ರಯಾಣ ಬೆಳೆಸಿದರು. ಚೆನ್ನಬಸವಣ್ಣ ಇವರೆಲ್ಲರಿಗೆ ಮಾರ್ಗದರ್ಶಿಯಾದರು. ಅವರು ಕ್ರಿ.ಶ. 1168 ರಲ್ಲಿ ಲಿಂಗೈಕ್ಯರಾದ ಸ್ಥಳವೇ ಉಳವಿ ಎಂದು ಖ್ಯಾತವಾಗಿದೆ.

ವೀರ ಶೈವ ಧರ್ಮದ ಪುಣ್ಯ ಸ್ಥಳ ಉಳವಿಯ ಸುತ್ತಲಿನ ಗವಿಗಳು, ಪುಷ್ಕರಣಿಗಳು, ಕಣಿವೆಗಳು ಭಕ್ತಾದಿಗಳಿಗೆ ಶಾಂತಿಯನ್ನು, ಭಕ್ತಿಯ ಚಿಲುಮೆಯನ್ನು ನೀಡುವ ಸ್ಥಳಗಳಾಗಿವೆ. ಉಳವಿಗೆ ಚಕ್ಕಡಿ ಗಾಡಿಗಳಲ್ಲಿ ಬಂದು ಸೇವೆ ಸಲ್ಲಿಸುವದು ಹಲವಾರು ವರ್ಷಗಳಿಂದ ನಡೆದು ಬಂದಿದೆ. ಚಕ್ಕಡಿಯನ್ನು ಎಳೆದು ತರುವ ಬಸವಣ್ಣ ಪೂಜಾರ್ಹ. ಆತ ಉಳವಿಗೆ ಬಂದು ಸೇವೆ ಸಲ್ಲಿಸುತ್ತಾನೆ. ಭಕ್ತಾದಿಗಳ ಪ್ರವಾಹ ಮೊದಲಿನಿಂದಲೂ ಇತ್ತು. ಹಲವು ದಿನಗಳ ಪ್ರಯಾಣದ ನಂತರ ಉಳವಿಗೆ ಬಂದು ಪ್ರಸಾದ ಸ್ವೀಕರಿಸಿ, ವಾಪಸಾಗುವುದರಿಂದ ಜೀವನ ಸಾರ್ಥಕವಾಗುವುದು ಎಂದು ಭಕ್ತಾದಿಗಳು ನಂಬಿದ್ದಾರೆ. ಕಾಲು ನಡಿಗೆಯಿಂದ ಬಂದು ಸೇವೆ ಸಲ್ಲಿಸುವವರೂ ಇದ್ದರು. ಇವರೆಲ್ಲರಿಗೆ ಚೆನ್ನಬಸವಣ್ಣ ಸ್ಪೂರ್ತಿಯಾಗಿದ್ದ. ಕಾಡುಗಳಲ್ಲಿಯ ವನ್ಯಜೀವಿಗಳು ಇವರನ್ನು ರಕ್ಷಿಸುತ್ತಿದ್ದವು ಎಂದೂ ಹೇಳಲಾಗುತ್ತಿದೆ. ಭಕ್ತಿಯೊಂದಿದ್ದರೆ ಇಡೀ ಜೀವನವು ಬೆಳಕಿನಿಂದ ಕೂಡಿರುತ್ತದೆ ಎಂಬುದ ಉಳವಿಯಲ್ಲಿ ಸಾಕಾರವಾಗಿದೆ.

ಯಾವುದೇ ಆಡಂಬರಗಳಿಲ್ಲ. ಅದ್ದೂರಿಗಳಿಲ್ಲ. ರಾಜಕೀಯ ಪ್ರಭಾವವಿಲ್ಲ. ಉಳವಿಯಲ್ಲಿಯ ಪ್ರಕೃತಿಯು ಚೆನ್ನಬಸವಣ್ಣನಿಗೆ ಆಶ್ರಯ ನೀಡಿದೆ. ಇಂತಹ ಪುಣ್ಯನೆಲದಲ್ಲಿ ಪ್ರತಿವರ್ಷ ಜಾತ್ರೆ ನಡೆದು ಬಂದಿದೆ. ಈ ಅವಧಿಯಲ್ಲಿ ಯಾವುದೇ ಅನಾಹುತಗಳು ನಡೆದ ದಾಖಲೆಯೇ ಇಲ್ಲ. ಸರಕಾರದ ನೆರವುಗಿಂತ ಭಕ್ತಾಧಿಗಳು ನೀಡಿದ ನೆರವೇ ಉಳವಿ ಇಷ್ಟಾದರೂ ಬೆಳೆಯಲು ಸಹಾಯಕವಾಗಿದೆ. ಹೀಗಾಗಿ ಅಧಿಕಾರದವರ ಪ್ರಭಾವವನ್ನು ಉಳವಿಯು ಎಂದೂ ನಿರೀಕ್ಷಿಸದು. ಇಲ್ಲಿರುವದು ಮಾನವ ಧರ್ಮ, ಮೇಲಿಲ್ಲ ಕೀಳೂ ಇಲ್ಲ. ಇಲ್ಲಿ ಎಲ್ಲರೂ ಒಂದೇ. ಇಂತಹ ಪುಣ್ಯಕ್ಷೇತ್ರ ಉಳವಿಯಾಗಿದೆ.

ಸಹ್ಯಾದ್ರಿಯ ತವರೂರು ಉತ್ತರ ಕನ್ನಡ ಜಿಲ್ಲೆ. ಆಕರ್ಷಕ ವಾಸ್ತುಶಿಲ್ಪ ಕಲೆಗಳ ಬೀಡು, ಕದಂಬರಾಳಿದ ನಾಡು, ಶರಣರು ಮೆಟ್ಟಿದ ಪಾವನ ಭೂಮಿ. ಇವರ ಕಾಲದಲ್ಲಿ ನಿರ್ಮಾಣಗೊಂಡ ಕೆಲವು ಶ್ರೇಷ್ಠ ದೇವಾಲಯಗಳನ್ನು ಇಲ್ಲಿ ಕಾಣಬಹುದು. ಅವುಗಳಲ್ಲಿ ಉತ್ತರ ಕರ್ನಾಟಕದ ಸುಪ್ರಸಿದ್ದ ಉಳವಿಯ ಶ್ರೀ ಚನ್ನಬಸವೇಶ್ವರ ಕ್ಷೇತ್ರ ಹಲವು ದೃಷ್ಟಿಗಳಿಂದ ವೈಶಿಷ್ಟಪೂರ್ಣವಾಗಿದೆ.

ನಮ್ಮ ಸನಾತನ ಸಂಸ್ಕೃತಿಯ ದಿಕ್ಪಾಲಕ 'ಉಳವಿ' ದುರ್ಗಮವಾಗಿರುವಂತೆಯೆ ದುರ್ಭೇದ್ಯ ರಹಸ್ಯಗಳ ತವರೂ ಆಗಿದೆ. ಪ್ರವಾಸಿಗರ ಪಾಲಿಗೆ ನಿಸರ್ಗದ ಅದಮ್ಯ ಆಕರ್ಷಣೆಯ ಮೋಡಿ ತಪ್ಪಿದ್ದಲ್ಲ. ಯೋಗಿಗಳಿಗೆ ಇದು ನಿತ್ಯ ಶಾಂತಿಯ ಧಾಮ. ಶರಣರಿಗೆ ಪಾವನ ತಪೋಭೂಮಿ. ಆಸ್ತಕರಿಗೆ ಕೈಲಾಸ. ವಿಲಾಸಿಗಳಿಗೆ ಇದರ ತಪ್ಪಲು ಗಿರಧಾಮ, ಸುಖವಾಸಗಳ ಕೇಂದ್ರ. ಇಂತಹ ಸುಂದರ ತಪೋಭೂಮಿ ಉಳವಿ. ಅಲ್ಲಿಂದ ಮರಳಿ ಬಂದವರೆಲ್ಲರಲ್ಲೂ ಧನ್ಯತಾ ಭಾವನೆ ತುಂಬಿ ತುಳುಕುತ್ತಿರುತ್ತದೆ. ಗಿರಿಶಿಖರಗಳ ಸಾಲುಗಳಲ್ಲಿ ಅಲೌಖಿಕವಾದ ಅನುಭವವನ್ನು ಉಣಬಡಿಸುತ್ತದೆ. ಇವೆಲ್ಲಕ್ಕೂ ಕಿರಿಟವಿಟ್ಟಂತೆ ಕಂಗೊಳಿಸುವ ರಂಗು ರಂಗಿನ ನಿತ್ಯ ಹರಿದ್ವರ್ಣ ಕಾಡು, ಕಾಡಿನ ನಡುನಡುವೆ ಕಾಣುವ ಫಲ ಪುಷ್ಪಗಳು ವೈಭವೋಪೇತವಾಗಿ ರಸಾನಂದವನ್ನು ನೀಡುತ್ತದೆ. ಇಂತಹ ಸುಂದರ ದೃಶ್ಯಕಾವ್ಯವನ್ನು ಕಣ್ಣಾರೆ ಕಾಣಬೇಕೇಂದಿದ್ದರೆ ಉಳವಿಯ ಹೋಗಬೇಕು.

ದಾಂಡೇಲಿಯಿಂದ 45 ಕಿ.ಮೀ ದೂರದಲ್ಲಿರುವ ಉಳವಿ ಒಂದು ಚಿಕ್ಕ ಗ್ರಾಮ ಉಳವಿಯ ಸುತ್ತಲೂ ಗಿರಿಶಿಕರಗಳು ತಲೆಯೆತ್ತಿ ನಿಂತಿವೆ. ಇದೊಂದು ಆಯಕಟ್ಟಿನ ಸ್ಥಳ. ಇಲ್ಲಿಗೆ ಬರುವ ಯಾತ್ರಿಕರ್ರು ಪ್ರವೇಶಿಸುತ್ತಿದ್ದಂತೆ ದ್ವಾರ ಬಾಗಿಲಿನ ಮೇಲು ಮಂಟಪದಲ್ಲಿ ಸ್ವಾಗತಿಸುತ್ತಾ ನಿಂತಿದೆ ಶ್ರೀ ಚನ್ನಬಸವೇಶ್ವರ ಮೂರ್ತಿ. ಒಳ ಪ್ರವೇಶಿಸುತ್ತಿದ್ದಂತೆ ಜೀರ್ಣೋದ್ದಾರಗೊಂಡಿರುವ ಶ್ರೀ ಚನ್ನಬಸವೇಶ್ವರ ದೇವಾಲಯವನ್ನು ಕಾಣಬಹುದು. ದೇವಾಲಯದ ಮೇಲಿರುವ ಗೋಪುರದಲ್ಲಿ ಸುಂದರ ಕಲಾಕೃತಿಯ ಶರಣರ ನೆನಪನ್ನು ಸಾರುವ ವಿಗ್ರಹಗಳನ್ನು ನೋಡಬಹುದು. ದೇವಾಲಯದ ಎದುರಿನಲ್ಲಿ ಧರ್ಮಸ್ಥಂಭ ನಿಂತಿದೆ. ಈ ಶಿಲಾಸ್ಥಂಭದಲ್ಲಿ ವೀರಶೈವ ಧರ್ಮಸೂತ್ರಗಳಾದ ಅಷ್ಟಾವರಣ, ಪಂಚಾಚಾರ ಮತ್ತು ಷಟಸ್ಥಲಗಳನ್ನು ಕೆತ್ತಿಸಲಾಗಿದೆ. ದೇವಾಲಯದ ಒಳಗೆ ಪ್ರವೇಶಿಸುತ್ತಿದ್ದಂತೆ ಕ್ಷೇತ್ರಾಧಿಪತಿ ಶ್ರೀ ಚನ್ನಬಸವೇಶ್ವರ ಗದ್ದುಗೆ ಇದೆ. ಗರ್ಭಗುಡಿಯ ಒಳಗಡೆ ಸುಂದರ ಪೂಜಾ ಮೂರ್ತಿಗಳಿವೆ.ಈ ಮೂರ್ತಿಗಳಿಗೆ ಭಕ್ತಾಧಿಗಳು ಶೃದ್ಧೆ ಹಾಗೂ ಭಕ್ತಿಯಿಂದ ಪೂಜಿಸಿ ಕೃತಾರ್ಥರಾಗುತ್ತಾರೆ. ಭಕ್ತಾಧಿಗಳ ವಸತಿಗಾಗಿ ಸುತ್ತಲೂ ಕೊಟಡಿಗಳನ್ನು ನಿರ್ಮಿಸಲಾಗಿದೆ. ಭಕ್ತಾಧಿಗಳಿಗೆ ಉಚಿತ ವಸತಿ ಸೌಲಭ್ಯ, ದಾಸೋಹ ಕಾರ್ಯ ಪ್ರತಿ ನಿತ್ಯ ಜರುಗುತ್ತದೆ. ದೇವಾಲಯದ ಹೊರಾಂಗಣದಲ್ಲಿರುವ ಬೃಹತ್ ಅರಳಿ ಮರವೊಂದು ಶರಣರ ಹಲವು ದುರ್ಗಮ ರಹಸ್ಯಗಳನ್ನು ತನ್ನೊಡಲಲ್ಲಿಟ್ಟುಕೊಂಡು ಇಂದಿಗೂ ಇತಿಹಾಸದ ಮೂಲಕ ಸಾಕ್ಷಿಯಾಗಿದೆ. ಈ ಕ್ಷೇತ್ರದ ಸುತ್ತಮುತ್ತಲೂ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ಅಕ್ಕಮಹಾದೇವಿಯ ಗುಡಿ, ವೀರಭದ್ರ ಗುಡಿ ದಕ್ಷಿಣ ದಿಕ್ಕಿನಲ್ಲಿರುವ

ಎತ್ತು ಕಾಯುವ ಬಸವಣ್ಣನಗುಡಿ ಪ್ರಮುಖ್ಯವನ್ನು ಹೊಂದಿದ್ದರೆ ಸ್ವಲ್ಪ ದೂರದಲ್ಲಿ ಪುರಾತನ ಶಿವಾಲಯವಿದೆ. ಈ ಶಿವಾಲಯವನ್ನು ಸ್ವಾದಿ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆ ಎನ್ನಲಾಗಿದ್ದು, ಇಲ್ಲಿರುವ ಶಿವಲಿಂಗ ಅಪೂರ್ವ ಕೆತ್ತನೆಗಳಿಂದ ಕೂಡಿದೆ. ಈ ಶಿವಲಿಂಗ ಇಂದು ಪೂಜೆ ಪುರಸ್ಕಾರಗಳಿಲ್ಲದೆ ಪಾಳು ಬಿದ್ದಿದ್ದು ಇತಿಹಾಸವನ್ನು ಸಾರುವ ಸಾಕ್ಷಿಯಾಗಿ ನಿಂತಿದೆ. ಈ ದೇವಾಲಯವನ್ನು ಭಕ್ತಾಧಿಗಳು ಅದರ ಮೂಲ ಸ್ವರೂಪವನ್ನು ಬದಲಾಯಿಸದೇ ಜೀರ್ಣೋದ್ದಾರ ಮಾಡುವ ಅವಶ್ಯಕತೆ ಇದೆ. ಇದರ ಸುತ್ತಲೂ ಕೋಟೆ ಇದ್ದ ಕುರುಹುಗಳಿದ್ದು ಹಿಂದಿನ ಕಾಲದಲ್ಲಿ ಸ್ವಾದಿ ಅರಸರು ದರ್ಶನಕ್ಕೆ ಬಂದಾಗ ವಿಶ್ರಾಂತಿಗಾಗಿ ಇದನ್ನು ನಿರ್ಮಿಸಿರಬಹುದೆಮದು ತರ್ಕಿಸಲಾಗಿದೆ. ಪ್ರತಿ ವರ್ಷ ಫೆಬ್ರವರಿ ತಿಂಗಳ ಮಾಘ ಪೌರ್ಣಿಮೆಯಂದು ರಥೋತ್ಸವ ಜರಗುತ್ತದೆ. ರಥೋತ್ಸವಕ್ಕೆ 2 ಲಕ್ಷಕ್ಕೂ ಹೆಚ್ಚು ಜನ ಪಾಲ್ಗೊಳ್ಳುತ್ತಾರೆ. ರಥೋತ್ಸವಕ್ಕಾಗಿ ಬೆಳ್ಳಿರಥದ ಕೆಲಸ ಆರಂಭವಾಗಿದೆ. ಈ ರಥಕ್ಕಾಗಿ 100 ಕೆ.ಜಿ ಬೆಳ್ಳಿಯನ್ನು ಭಕ್ತರಿಂದ ಸಂಗ್ರಹಿಸಿದ್ದಾರೆ ಇದಕ್ಕೆ ಅಂದಾಜು 30 ರಿಂದ 35 ಲಕ್ಷ ರೂ, ವೆಚ್ಚ ತಗಲಬಹುದೆಂದು ಹೇಳಲಾಗಿದೆ. ಜಾತ್ರೆಯ ಸಂದರ್ಭದಲ್ಲಿ ಬರುವ ಭಕ್ತಾದಿಗಳಿಗಾಗಿ 'ಚೈತನ್ಯ' ವಸತಿ ಗೃಹವಿದೆ.

ಉಳವಿಯ ರಮಣೀಯವಾದ ನಿಸರ್ಗದ ಮಡಿಲಲ್ಲಿ ಇನ್ನೂ ಆಕರ್ಷಕ ತಾಣಗಳಿದ್ದು. ಅವುಗಳ ದರ್ಶನಕ್ಕೆ ಪೂರ್ಣ ತಯಾರಿ ಇಲ್ಲದೇ ಯಾರೂ ಹೊರಡುವಂತಿಲ್ಲ. ಉಳವಿ ದೇವಾಲಯದಿಂದ 4–5 ಕಿ.ಮೀ ಕಡಿದಾದ ಗುಡ್ಡ, ಕಣಿವೆಗಳನ್ನು ಏರಿಳಿದು ಹೊರಟರೆ ಸುಂದರವಾದ 'ಆಕಳ ಗವಿ'ತನ್ನು ನೋಡಬಹುದು. ಗವಿಯ ಒಳಗೆ ಮಲಗಿ ತೆವಳಿ ಹೋದರೆ ಮೇಲ್ಚಾವಣಿಯಲ್ಲಿ ಥಟ್ಟನೆ ನೋಡಿದರೆ ಅಲ್ಲಿ ಆಕಳ ಮೊಲೆಯಂತಿದ್ದು ಅದರಿಂದ ಹನಿ ಹನಿಯಾಗಿ ಒಸರುವ ದ್ರವ ತೊಟ್ಟಿಕ್ಕುತ್ತಿರುತ್ತದೆ. ಇದನ್ನು ಕಂಡು ಶರಣರು ಆಕಳ ಗವಿಯೆಂದು ಕರೆದರೆಂದು ಪ್ರತೀತಿ.ಈ ಗವಿಯಲ್ಲಿ ಶರಣರು ಕರೆದರೆನ್ನಲಾದ 'ಆಕಾಶ ಮಾರ್ಗ' ಎನ್ನುವ ಬೃಹತ್ ಕಿಂಡಿಯನ್ನು ನೋಡಬಹುದು. ಇಲ್ಲಿಂದ ನಿಸರ್ಗದ ಸೌಂದರ್ಯ ಸವಿಯಲು ಬಲು ಸುಂದರ. ಆಕಳ ಗವಿಯ ಅಕ್ಕಪಕ್ಕದಲ್ಲಿ 'ಅಕ್ಕನ ಗವಿ' 'ಹಳ್ಳದ ಗವಿ' 'ವಿಭೂತಿಕಣಜ' ಗಳ ದರ್ಶನಗೈಯಬಹುದು. ಇಲ್ಲಿಂದ ಕೊಂಚ ದೂರದಲ್ಲಿ ಹರಳಯ್ಯನ ಚಿಲುಮೆಯನ್ನು ನೋಡಬಹುದು. ಪರ್ವತದ ಒಂದು ಭಾಗದಿಂದ ಇದ್ದಕ್ಕಿದ್ದಂತೆ ನೀರು ಚಿಮ್ಮಿ ಹೊರಬರುತ್ತಿದ್ದು ಅಲ್ಲಿ ಒಂದು ಚಿಕ್ಕ ಹೊಂಡ ನಿರ್ಮಾಣವಾಗಿದೆ. ಈ ಹೊಂಡ ತುಂಬಿ ಎಡಭಾಗಕ್ಕೆ ಆಳದ ಕೊಳ್ಳಕ್ಕೆ ಹರಿದು ಹೋಗುತ್ತದೆ. ಥಟ್ಟನೆ ನೀರಿನ ಸೆಲೆ ಇಲ್ಲಿ ಚಿಮ್ಮಿ ಬರುತ್ತಿರುವ ದೃಶ್ಯ ನೋಡಲು ಸುಂದರ. ಇಲ್ಲಿಯೇ ಶರಣರು ತೃಷೆ ಅಡಗಿಸಿ ದಣಿವಾರಿಸಿಕೊಂಡರೆಂದು ಹೇಳಲಾಗುತ್ತಿದೆ. ಇಂದಿಗೂ ಇದು ಯಾತ್ರಾರ್ಥಿಗಳ ಪಾಲಿಗೆ ಪವಿತ್ರ ತೀರ್ಥ. ದಟ್ಟ ಕಾಡಿನ ಕಾಲುದಾರಿಯಲ್ಲಿ ಎಳೆಂಟು ಕಿ.ಮೀ ಗಿರಿಕಣಿವೆಗಳನ್ನು ದಾಟಿದಾಗ ಕಾಣಸಿಗುತ್ತದೆ. 'ಮಹಾಮನೆ' ಗವಿ ಇಲ್ಲಿಂದಲೇ 'ಶರಣ ಸಾಹಿತ್ಯ ಬಂಡಾರ ಸಂರಕ್ಷಣೆ ಹಾಗೂ ಪ್ರಸಾರದ ಮಹತ್ವದ ಐತಿಹಾಸಿಕ ನಿರ್ಣಯಗಳನ್ನು ಶರಣರು ಕೈಗೊಂಡರೆನ್ನಲಾಗಿದೆ.

ಉಳವಿಯಿಂದ 5 ಕಿ.ಮೀ ದೂರದಲ್ಲಿರುವ ಕೊಡಥಳ್ಳಿ ಗ್ರಾಮದ ದಟ್ಟಅರಣ್ಯ ಪ್ರದೇಶದಲ್ಲಿ ಸುಂದರವಾದ 'ಚನ್ನಬಸವೇಶ್ವರ ಜಲಪಾತ' ಪ್ರವಾಸಿಗರನ್ನು ನಿಸರ್ಗದ ಮಡಿಲಿಗೆ ಕೊಂಡೊಯ್ಯುತ್ತೆ. ಈ ಜಲಪಾತದಲ್ಲಿ ವರ್ಷವಿಡಿ ನೀರಿದ್ದು ಕಳೆದ ಒಂದು ವರ್ಷದಿಂದ ಪ್ರವಾಸಿಗರಿಗೆ ಈ ಜಲಪಾತವನ್ನು ವೀಕ್ಷಿಸಲು ಬೇಕಾದ ಸೌಲಭ್ಯವನ್ನು ಕಲ್ಪಿಸಲಾಗಿದೆ.

**ನಿಸರ್ಗದ ಕೊಡುಗೆ 'ಆಕಳ ಗವಿ'**

ಶ್ರೀಕ್ಷೇತ್ರ ಉಳವಿ ಚನ್ನಬಸವೇಶ್ವ ದೇವಸ್ಥಾನದ ಎದರಿನ ರಸ್ತೆಯಿಂದ ಅರ್ಧ ಕಿ.ಮೀ ಸಾಗಿದ ನಂತರ ಕಾಡನ್ನು ಪ್ರವೇಶಿಸಿ ಕಡಿದಾದ ದಾರಿಯಲ್ಲಿ ನಿಧಾನವಾಗಿ ಇಳಿಯಬೇಕು. ಮುಂದೆ ಸಾಗಿದಂತೆ ಹಾದಿಯೇ ಇಲ್ಲದ ಕಾಡು. ಇಳಿಜಾರುಗಳಲ್ಲ ಅಲ್ಲಲ್ಲಿ ಜಾರಿಕೆ, ಉರುಳಿದರೆ ಕೈಕಾಲು ಮುರಿದು ಕೊಳ್ಳವಷ್ಟು ಭಯ ಮುಂದೆ ಕಂದಕ. ಹಿಂದೆ ಶಿಖರ, ಕನಿಷ್ಟ ಹೀಗೆ ಒಂದುವರೆ ಕಿ.ಮೀ ಇಳಿದರೆ ಸುಸ್ತಾದವರಿಗೆ ಕುಡಿಯಲು ನಿಸರ್ಗದ ಕೊಡುಗೆಯಾದ ನೀರು. ಇಲ್ಲಿ ನೀರು ಕುಡಿದು ಕ್ಷಣಕಾಲ ವಿಶ್ರಾಂತಿ ಪಡೆದು ಮುಂದಕ್ಕೆ ಪಯಣ. ಈ ಕಡಿದಾದ ದಾರಿಯಲ್ಲಿ ಇಳಿಯುವ ಬದಲು ಗುಡ್ಡ ಏರುವ ಸಾಹಸಮಯ ಯಾತ್ರೆ. ಹೀಗೆ ಒಂದುವರೆ ಕಿ.ಮೀ ಏರಿ ಸುಸ್ತಾಗುತ್ತಿದ್ದಂತೆ ಮೊದಲಿಗೆ ಗುಹೆಯೊಂದು ಕಾಣುತ್ತದೆ. ಅದನ್ನೇ ಆಕಳ ಗವಿ ಎಂದು ಭಾವಿಸಿದಿರಿ. ಆದರೆ ಅದು ಆಕಳಗವಿಯಲ್ಲ. ವಿಭೂತಿ ಕಣಜ ಗುಹೆ ಪ್ರವೇಶಿಸುವ ಮುನ್ನ ಬ್ಯಾಟರಿ ಹಾಗೂ ಮೇಣದ ಬತ್ತಿಗಳನ್ನು ಹೊತ್ತಿಸಿ ಒಳಕ್ಕೆ ಸ್ವಲ್ಪ ಮುಂದೆ ಸಾಗಿದರೆ ಒಳಗಿನ ಮುಸುಕು ಬೆಳಕಿನಲ್ಲಿ ಕಣಜದ ಆಕಾರದ ಕಲ್ಲೊಂದು ಇದೆ. ಇಲ್ಲಿನ ಸುತ್ತ ಪ್ರದಕ್ಷಿಣೆ ಹಾಕುವಷ್ಟು ಸ್ಥಳವಿದೆ. ಈ ಕಲ್ಲನ್ನು ಉಜ್ಜಿದರೆ ವಿಭೂತಿ ಸಿಗುತ್ತದೆ. ಈ ಹಿನ್ನೆಲೆಯಲ್ಲೇ ಶರಣರು ಇದನ್ನು ವಿಭೂತಿ ಕಣಜವೆಂದು ಕರೆದರೆನ್ನಲಾಗಿದೆ.ಇಲ್ಲಿಂದ ಮತ್ತೆ ಪಯಣ ಆರಂಭಿಸಿ ಪುನಃ ದುರ್ಗಮವಾದ ಇಳಿಜಾರಿನಲ್ಲಿ ಇಳಿಯಬೇಕು. ಹೀಗೆ ಇಳಿಯುತ್ತಾ ಇಳಿಯುತ್ತಾ ಸ್ವಲ್ಪ ದೂರದ ಬೆಟ್ಟದ ಬುಡಕ್ಕೆ ತಲಪುತ್ತೀರಿ. ಅಲ್ಲಿ ಇನ್ನೊಂದು ಬೆಟ್ಟ ದಕ್ಷಿಣದ ಕಡೆಗೆ ತಿರುಗಿ ಬೆಳೆಯುತ್ತಾ ಹೋದಂತೆ ಕಾಣುತ್ತದೆ. ಈ ಎರಡೂ ಬೆಟ್ಟಗಳ ಸಂದಿ ಸ್ಥಳದಲ್ಲಿ ಬೃಹದಾಕಾರದ ಕಲ್ಲು ಬಂಡೆಗಳನ್ನು ಅಲ್ಲಲ್ಲಿ ಚೆಲ್ಲಿದಂತೆ ಕಾಣುತ್ತದೆ.

ಪ್ರಕೃತಿ ನಿರ್ಮಿತ ಅಚ್ಚರಿಯ ಕಲಾಕೃತಿಗಳು ಇಲ್ಲಿ ಸೋಜಿಗವನ್ನುಂಟು ಮಾಡುತ್ತದೆ. ಇಂತಹ ಮನಮೋಹಕ ದೃಶ್ಯಗಳ ಮುಂದೆ ಆಕಳ ಗವಿ ಬಂದೆ ಬಿಡುತ್ತದೆ. ಎದುರಿಗೆ ಕನಿಷ್ಠ 50 ಮೀಟರ ಮಿಕ್ಕಿದ ಎತ್ತರದ ಬೃಹತ ಬಂಡೆ, ಕನಿಷ್ಠ 30 ಮೀಟರ ಎತ್ತರವನ್ನು ಏಣಿಯ ಸಹಾಯದಿಂದ ಏರಬೇಕು. ಈ ಎತ್ತರವನ್ನು ಏರಿ ಕಿರಿದಾದ ಗುಹೆಯ ದ್ವಾರದ ಕಿಂಡಿಯ ಮೂಲಕ ಮಲಗಿ ಸ್ವಲ್ಪ ದೂರ ತೆವಳಿ ಮುಂದಕ್ಕೆ ಸಾಗಿದರೆ ಮುಂದೆ ಗುಹೆಯ ಒಳಗೆ ವಿಸ್ತಾರವಾದ ಜಾಗೆ ಎದ್ದು ನಿಲ್ಲುವಷ್ಟು ಸ್ಥಳವಿದೆ.ಗುಹೆಯ ಒಂದು ಭಾಗದಲ್ಲಿ ಅಗಲವಾದ ಕಿಂಡಿ ಕಿರು ಕಿಟಕಿಯಂತೆ ಕಾಣುತ್ತದೆ. ಇಲ್ಲಿಂದ ಸಾಕಷ್ಟು ಗಾಳಿ ಬೆಳಕು ಗುಹೆಗೆ ಒದಗಿಸುತ್ತದೆ. ಹೊರಜಗತ್ತನ್ನು ಇಲ್ಲಿಂದ ಸ್ಪಷ್ಟವಾಗಿ ನೋಡಬಹುದು. ಇದನ್ನೇ ಶರಣರು 'ಆಕಾಶ ಮಾರ್ಗ' ವೆಂದಿದ್ದಾರೆ. ಉಳವಿಯ ಗುಹಾಂತರ್ಗತ'ಮಹಾಮನೆ'

*ಉಳವಿ ಕ್ಷೇತ್ರವು ವೀರಶೈವರ ಪವಿತ್ರ ಯಾತ್ರಾ ಸ್ಥಳವಾಗಿ. ಲಿಂಗಾಯತ ಜನರು ಬಹುವಾಗಿ ಗೌರವಿಸುವ ಚನ್ನಬಸವಣ್ಣನವರ ಸಮಾಧಿ ಇಲ್ಲಿ ಇದೆ. ೧೨ ನೇ ಶತಮಾನದಲ್ಲಿ, ಚನ್ನಬಸವಣ್ಣನವರು ಸಾಯುವ ಮೊದಲು ಕಲ್ಯಾಣ ದಿಂದ ಉಳವಿಗೆ ಬಂದರು. ಚನ್ನಬಸವಣ್ಣನ ತಾಯಿ ಮತ್ತು ಬಸವಣ್ಣನ ಸೋದರಿ ಅಕ್ಕ ನಾಗಲಾಂಬಿಕೆ ಹೆಸರಿನಲ್ಲಿರುವ ಗುಹೆಯು ಈ ಪವಿತ್ರ ಸಮಾಧಿಗೆ ಹತ್ತಿರದಲ್ಲಿ ಇದೆ. ಉಳವಿ ಜಾತ್ರೆಗೆ ಕರ್ನಾಟಕದ ಎಲ್ಲೆಡೆಯಿಂದ ಭಕ್ತರು*

*ಬರುತ್ತಾರೆ.ಉಳವಿಯು ಪಶ್ಚಿಮ ಘಟ್ಟಗಳಲ್ಲಿ ಇದ್ದು ಇಲ್ಲಿನ ದಟ್ಟ ಕಾಡುಗಳಲ್ಲಿ ಹುಲಿ, ಚಿರತೆ, ಆನೆ, ಸಾರಂಗ, ನಾಗರಹಾವು ಮತ್ತು ಇತರ ವನ್ಯಜೀವಿಗಳಿವೆ.ಹತ್ತಿರದ ಸ್ಥಳಗಳು: ದಾಂಡೇಲಿ, ಧಾರವಾಡ, ಹುಬ್ಬಳ್ಳಿ.ಸಾರಿಗೆ: ಸ್ವಂತ ವಾಹನದಲ್ಲಿ ಪ್ರಯಾಣ ಮಾಡುವುದು ಉತ್ತಮ. ಹುಬ್ಬಳ್ಳಿ, ಚಿತ್ರದುರ್ಗ, ಹಾವೇರಿ ಮತ್ತು ಬೆಳಗಾವಿಯಿಂದ ಬಸ್ಸುಗಳಿವೆ.ಸಿಂಥೇರಿ ಬಂಡೆ, ಕಾಳಿ ನದಿ, ಅಣಸಿ ಮೀಸಲು ಅರಣ್ಯ , ಸೂಪಾ ಅಣೆಕಟ್ಟು ಇಲ್ಲಿನ* ಉತ್ತರ ಕನ್ನಡದ ಉಳವಿಯ ನಿಸರ್ಗದ ಮಡಿಲಲ್ಲಿರುವ ಗುಹಾಂತಹ ಮಹಾಮನೆಯು ಆಧ್ಯಾತ್ಮಿಕ ಚಿಂತನೆಯ ಮೂಲ ಸ್ಥಳವೆನಿಸಿದೆ. 1160 ರ ದಶಕದಲ್ಲಿ ಉಳವಿಗೆ ಕಾಲಿಟ್ಟ ಅವಿರಳ ಜ್ಞಾನಿ ಶ್ರೀ ಚನ್ನಬಸವಣ್ಣನವರ ಪಾದಸ್ಪರ್ಶದಿಂದ ಮಹಾಮನೆಯು ಪಾವನವಾಗಿದೆ. ಈ ಮಹಾಮನೆಯಲ್ಲಿ ನಡೆದ ಶರಣರ ಅನುಭಾವಗೋಷ್ಠಿಗಳು, ಚಿಂತನ ಮಂಥನಗಳ ಕಾರಣವಾಗಿ ಹುಟ್ಟಿಕೊಂಡ ವಚನ ಸಾಹಿತ್ಯ ಸಂಪತ್ತು ಕನ್ನಡ ಸಾಹಿತ್ಯದ ಅನರ್ಘ್ಯ ರತ್ನಬಂಡಾರವಾಗಿದೆ.ಉಳವಿಯ ಶ್ರೀ ಚನ್ನಬಸವೇಶ್ವರ ಕ್ಷೇತ್ರದ ನಿಸರ್ಗದ ಮಡಿಲಲ್ಲಿರುವ ಗುಹಾಂತರ್ಗತ ಮಹಾಮನೆ ಎಂತವನನ್ನೂ ಭಾವುಕನಾಗಿಸತ್ತದೆ. ಇಂತಹ ಪ್ರಕೃತಿ ಸೌಂದರ್ಯದ ಮಡಿಲಿಗೆ ಭೇಟಿಕೊಟ್ಟು ನೋಡಿ! ಆ ಅದ್ಬುತ ಶಿಲಾನ್ಯಾಸ ಹೊಂದಿದ ಪ್ರಕೃತಿ ಸಹಜ ಗುಹಾಂತಹ ಮಹಾಮನೆಯ ಕಲ್ಪನೆಗಳಲ್ಲಿ ತೇಲಿ ಹೋಗಿ ಭಾವುಕರಾಗಿ ಬಿಟ್ಟಿರಿ !

ಆ ವರ್ತಮಾನದ ನೆಲೆಗಟ್ಟಿನಿಂದ ಭೂತಕಾಲಕ್ಕೆ ಹೋದಂತೆ ಅರ್ಥವಾಗ ತೊಡಗುತ್ತದೆ. ಮಹಾಮನೆಯ ಇತಿಹಾಸ. ಇಡೀ ನಿಸರ್ಗವೇ ತನ್ನೊಳಗಿನ ವೃತ್ತಾಂತವನ್ನು ನಿಮ್ಮೆದುರು ಹಂಚಿಕೊಂಡು ಅನುಭವ. ಇಲ್ಲಿ ಅಡಗಿರುವ ಅಂತರ್ಗತವಾದ ಸತ್ಯಗಳು ಎಂದೆಂದಿಗೂ ಅಮರ, ಇತಿಹಾಸದ ಹಿನ್ನೆಲೆಯನ್ನೇ ಅವಲೋಕಿಸಿ ನೋಡಿದಾಗ ಶರಣರ ಧರ್ಮದ ಉಳುವಿನ ಯಾತ್ರೆಯಲ್ಲಿ ಮಹಾಮನೆಯ ಪಾತ್ರ ಅವಿಸ್ಮರಣೀಯ. ಪ್ರಕೃತಿಯ ಮಡಿಲಿನಲ್ಲಿ ಯಾರ ಕಣ್ಣಿಗೂ ಬೀಳದೆ ಸ್ವಚ್ಛಂಧವಾಗಿ ಅಡಗಿ ಕುಳಿತ್ತಿದ್ದ ಈ ಮಹಾಮನೆಯನ್ನು ಮೊಟ್ಟಮೊದಲು ಗುರುತಿಸಿ ಹೆಸರಿಟ್ಟವರೆ ಶರಣರು, ಅದುವರೆಗೆ ಮಾನವನ ಕಣ್ಣಿಗೆ ಬೀಳದೆ ಇದ್ದ ಗುಹಾಂತರ್ಗತ ಮಹಾಮನೆ ಧರ್ಮದ ಉಳಿವಿಗಾಗಿ ಬಂದ ಶರಣರಿಗೆ ಆಶ್ರಯ ಸ್ಥಾನ ನೀಡಿತ್ತು. 12 ನೇ ಶತಮಾನದ ಆರಂಭದಲ್ಲಿ ಚನ್ನಬಸವಣ್ಣ ಮತ್ತು ಸಂಗಡಿಗರು ಗುಡ್ಡ, ಬೆಟ್ಟ ಕೊಳ್ಳಗಳನ್ನು ದಟಿ ಕಡಿದಾದ ಮಾರ್ಗದಲ್ಲಿ ಸಾಹಸಮಯವಾಗಿ ಜೀವನವನ್ನೇ ಪಣಕ್ಕಿಟ್ಟು ಉಳವಿಯೆಡೆಗೆ ಬರತೊಡಗಿದರು. ಅತೀ ಕಷ್ಟಕರವಾದ ಮಾರ್ಗದ ಮೂಲಕ ಸಾಗುತ್ತಿದ್ದಂತೆ ಬೆಟ್ಟದ ತುದಿಯಂಚಿನಲ್ಲಿರು ದೈತ್ಯಾಕಾರದ ಬರೆಯನ್ನು ಬಂಡೆಯಲ್ಲಡಗಿದ ಗುಹೆಯನ್ನು ಅದರೊಳಗೆ ಹರಿಯ ಬಿಟ್ಟಿರುವ ಕಿರು ಹಳ್ಳವನ್ನು ನೋಡಿ ಮೂಕವಿಸ್ಮತರಾದರು. ಇಲ್ಲಿಯೇ ವಿಶ್ರಮಿಸಿದ ಶರಣರು ಇದರ ಸೌಂದರ್ಯಕ್ಕೆ ಮಾರುಹೋಗಿ ಗುಹೆಯನ್ನು ಪ್ರವೇಶಿಸಿದರು. ಗುಹೆಯ ಮಡಿಲಿನಲ್ಲಿ ಸ್ವಚ್ಛಂದವಾಗಿ ಹರಿದು ಹೋಗುತ್ತಿದ್ದ ಹಳ್ಳ ಪಕ್ಕಕ್ಕೆ ಮರೆಯಾಗುತ್ತಿರುವುದನ್ನು ಗಮನಿಸಿದರು. ಅದರ ಪಕ್ಕದಲ್ಲಿ ಕಿರಿದಾದ ಕಿಂಡಿಯಿಂದ ತೆವಳಿ ಮುಂದೆ ಸಾಗಿದಾಗ ಕಂಡದ್ದೇ ಸಾಕಷ್ಟು ಗಾಳಿ– ಬೆಳಕು ಹೊಂದಿದ ವಿಸ್ತಾರವಾದ ಸ್ಥಳ. ಈ ಗುಹಾಂತರ ಮನೆಯ ರಹಸ್ಯವನ್ನು ಮೊಟ್ಟಮೊದಲು ಕಂಡವರೇ ಇವರು.ಶರಣರ ಪಾದಸ್ಪರ್ಶದಿಂದ ಈ ಮನೆ ಪಾವನವಾಯಿತು. ಇದನ್ನೇ ಚನ್ನಬಸವಣ್ಣ 'ಮಹಾಮನೆ'ಯೆಂದು ಉದ್ಗರಿಸಿದವರೆನ್ನಲಾಗಿದೆ. ನಂತರ ಇಲ್ಲಯೇ ತಂಗಿದ ಇವರು ಇದರ ಮುಂಭಾಗದಲ್ಲಿ ಲಿಂಗ–ನಂದಿಯನ್ನು ಸ್ಥಾಪಿಸಿದರು. ಒಳಗಿನ ಮಹಾಮನೆಯಲ್ಲಿ ವೀರಭದ್ರನ ಪ್ರತಿಷ್ಠಾಪನೆಯು ನಡೆದು ಶರಣರೆಲ್ಲ ಒಟ್ಟುಗೂಡಿ ಅನುಭಾವಗೋಷ್ಟಿಗಳನ್ನು ನಡೆಸಿದರು. ಇಲ್ಲಿಯೇ ಚನ್ನಬಸವಣ್ಣ ಉಳವಿಗೆ ಬಂದ ಶರಣರೆಲ್ಲ ಧರ್ಮದ ಸತ್ಯವನ್ನು ನಾನಾ ಕಡೆಗಳಿಗೆ ಹೊತ್ತೊಯ್ಯುವ ಸತ್ವಶಾಲಿಗಳಾಗಬೇಕು ಎಂದು ಬಯಸಿದ್ದು. ಇಲ್ಲಿಂದಲೇ ಅದಕ್ಕನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿದ್ದು. ಇದರ ಜೊತೆಗೆ ಜತನದಿಂದ ಕಾಯ್ದುಕೊಂಡು ಬಂದಂತಹ ಶರಣ ಸಾಹಿತ್ಯದ ರಕ್ಷಣೆ, ವಚನ ಸಾಹಿತ್ಯದ ಸೃಷ್ಟಿಯೂ ಆಯಿತು. ಚನ್ನಬಸವಣ್ಣನವರ ಶ್ರಮ ಸಾರ್ಥಕತೆಯ ಹಾದಿಯನ್ನು ಹಿಡಿಯಿತು. ಕಲ್ಯಾಣದ ಮಹಾಮನೆಯ ಆಶ್ಯಗಳು ಉಳವಿಯ ಮಹಾಮನೆಯಿಂದ ಪ್ರಾರಂಭಗೊಂಡು ಜಗತ್ತಿನ ಮಹಾಮನೆಗೆ ಹರಡುವ ಕಾರ್ಯವನ್ನು ಚನ್ನಬಸವಣ್ಣನವರು ಆರಂಭಿಸಿ ಇಲ್ಲಿಯೇ ಅವರು ಐಕ್ಯರಾದರೆನ್ನುವುದು ಇತಿಹಾಸ.

**ರುದ್ರಾಕ್ಷಿ ಮಂಟಪ**

ಉಳವಿ ಶ್ರೀಕ್ಷೇತ್ರದಿಂದ 'ಆಕಳಗವಿ' ಗೆ ಹೋಗುವ ಮಾರ್ಗದಲ್ಲಿ 'ವಿಭೂತಿ ಕಣಜ'ವನ್ನು ದಾಟಿ ಕಡಿದಾಗ ಇಳಿಜಾರಿನಲ್ಲಿ ಎಡಕ್ಕೆ ಇಳಿದಾಗ ಮಟ್ಟಸವಾದ ಬಯಲು ಪ್ರದೇಶ. ಅಲ್ಲಿಂದ ಬಲಕ್ಕೆ ನೋಡಿದಾಗ ಬೃಹತ ಕಪ್ಪು ಶಿಲೆಯೊಂದು ಕಾಣುತ್ತದೆ. ಈ ಶಿಲೆಯ ಬುಡಕ್ಕೆ ಬಂದು ನೋಡಿದರೆ ಚಿಕ್ಕದಾದ ಗುಹೆಯ ಬಾಗಿಲನ್ನು ಕಾಣಬಹುದು. ಈ ಬಾಗಿಲಿನ ಮೂಲಕ ಬಗ್ಗಿ ತೆವಳಿ ಒಳಹೋದರೆ ಅಲ್ಲಲ್ಲಿ ಗುಹೆಯೊಳಗಿನ ಮೇಲ್ಚಾವಣಿಯ ಕಲ್ಲುಗಳು ಬಾಚಿ ನಿಂತಿದೆ. ಈ ಕಲ್ಲುಗಳನ್ನು ತಟ್ಟಿದರೆ ಜಾಗಟೆಯಂತೆ ನಿನಾದ ಹೊರಹೊಮ್ಮುತ್ತದೆ. ಅಲ್ಲಿಂದ ಸ್ವಲ್ಪ ಮುಂದೆ ಸಾಗಿದರೆ ಕಲ್ಲು ಮಂಟಪದಂತೆ ಕಾಣುವ ಶಿಲಾನ್ಯಾಸವಿದೆ. ಈ ಮಂಟಪದ ಮೇಲೆ ರುದ್ರಾಕ್ಷಿಯಿಂದ ಅಲಂಕರಿಸಿದ ಮಾಲೆಯಂತೆ ಚಿತ್ರಗಳಿವೆ. ಇದರೊಳಗೆ ಗಣೇಶನ ಆಕೃತಿಯೊಂದು ಶಿಲೆಯಲ್ಲಿ ಮೂಡಿ ಬಂದಿದೆ. ಇದನ್ನು ಕಂಡ ಶರಣರು ರುದ್ರಾಕ್ಷಿಯಿಂದ ಅಲಂಕರಿಸಿದ ಮಾಲೆಯಂತೆ ಚಿತ್ರಗಳಿವೆ. ಇದರೊಳಗೆ ಗಣೇಶನ ಆಕೃತಿಯೊಂದು ಶಿಲೆಯಲ್ಲಿ ಬಂದಿದೆ. ಇದನ್ನು ಕಂಡ ಶರಣರು ರುದ್ರಾಕ್ಷಿ ಮಂಟಪವೆಂದು ಕರೆದರೆಂದು ಪ್ರತೀತಿ ಇದೆ. ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕು ಪರಿಸರ ಪ್ರಿಯರ ಸ್ವರ್ಗವಾಗಿದೆ. ಇದೇ ತಾಲೂಕಿನಲ್ಲಿ ಶಿವಶರಣರ ಪವಿತ್ರಕ್ಷೇತ್ರ ಉಳವಿಯಿದೆ. ಕಲ್ಯಾಣದಲ್ಲಿ ನಡೆದ ಶಿವಾನುಭವ ಮಂಟಪದ ಧರ್ಮ ಸಂಸದ್ ಜಗತ್ತಿನಲ್ಲಿಯೇ ಪ್ರಪ್ರಥಮವಾದದ್ದು ಎಂಬ ಹೆಗ್ಗಳಿಕೆ ಪಾತ್ರವಾಗಿದೆ. ಇಂದಿಗೂ ಬಸವಣ್ಣನವರು ಹಾಕಿದ ಹಾದಿಯು ಎಲ್ಲರ ಮಾರ್ಗವಾಗಿದೆ ಬಿಜ್ಜಳನ ಕಲ್ಯಾಣ ಬಸವಣ್ಣನವರಿಂದಾಗಿ ಅನೇಕ ದಾಖಲೆಗಳನ್ನು ಸ್ಥಾಪಿಸಿತು. ಮಾನವ ಧರ್ಮವೇ ಶ್ರೇಷ್ಠ ಎಂಬುದನ್ನು ಜಗತ್ತಿಗೆ ಸಾರಿತು.

ವಚನವೊಂದರಲ್ಲಿ ಶ್ರೀ ಕ್ಷೇತ್ರ ಉಳವಿಯಲ್ಲಿ ಪಾದವಿಟ್ಟು ಮಹಾಬಯಲಿನಲ್ಲಿ ಬಯಲಾದದ್ದು ಗುರುವಿನ ಅಪ್ಪಣೆಯಂತೆ ಎಂಬುದನ್ನು ಹೇಳಲಾಗಿದೆ. ಕಲ್ಯಾಣದ ಕ್ರಾಂತಿಯ ನಂತರ ಅವಧಿ ಅಳಿಯಿತ್ತು ವ್ಯವಧಾನವುಳಿಯಿತು ನಿಜವನಗೊಡಗೂಡಿತ್ತು. ಕೇಳು ಬಸವಣ್ಣ ಕಲಿಯುದಲ್ಲಿ ಮುಂದೆ ಇರಬಾರದು ನಿಜ ಶರಣರಿಗೆ; ನಡೆ ನೀನು ಕಪ್ಪಡಿಯ ಸಂಗಯ್ಯನಲ್ಲಿ ಒಡಗೂಡು. ಉಳವಿಯಲ್ಲಿ ನಿಜವನೆಯ್ದು ನಡೆ ಚೆನ್ನಬಸವಣ್ಣ ಎಂಬ ವಚನದಿಂದ

ಬಸವಣ್ಣನವರು ಕಪ್ಪಡಿ ಸಂಗಮನಾಥದಲ್ಲಿ ಐಕ್ಯವಾದದ್ದು ಜಂಗಮ ಕ್ಷೇತ್ರ ಶ್ರೀಕ್ಷೇತ್ರ ಉಳವಿಯಲ್ಲಿ ಎಂದು ಹೇಳಲಾಗುತ್ತಿದೆ.

ಸುಮಾರು 1160 ರಲ್ಲಿ ಉಳವಿಯಲ್ಲಿ ಚೆನ್ನಬಸವಣ್ಣ ಇದ್ದ ಬಗ್ಗೆ ದಾಖಲೆಗಳಿವೆ. ಕಲ್ಯಾಣದಿಂದ ಉಳವಿಗೆ ಬರುವ ಹಾದಿಯಲ್ಲಿ ಹೀಗೆ ಶಿವಶರಣರು ಚೆನ್ನಬಸವಣ್ಣನವರನ್ನು ಹಿಂಬಾಲಿಸಿದರು. ದಟ್ಟ ಕಾಡಾಗಿದ್ದ ಉಳವಿಯು ಅವರಿಗೆ ಪ್ರಶಸ್ತ ಸ್ಥಳವಾಗಿತ್ತು ಕೂಡ. ಕದಂಬ ಅರಸರ ಪೆರ್ಮಾಡಿ ದೇವ ಚೆನ್ನಬಸವಣ್ಣ ಹಾಗೂ ಇತರರಿಗೆ ಸಹಕಾರ ನೀಡಿದ್ದ ಕುರಿತು ದಾಖಲೆಗಳಿವೆ. ಅಂದಿನಿಂದ ಉಳವಿ ಶಿವಶರಣರ ಪುಣ್ಯಕ್ಷೇತ್ರವಾಗಿ ಬೆಳೆಯಿತು. 1162 ರಲ್ಲಿ ಧಾರವಾಡದ ಮೃತ್ಯುಂಜಯ ಸ್ವಾಮಿಗಳು ಕದಂಬ ಅರಸರ ಸಹಾಯದೊಂದಿಗೆ ಉಳವಿಯ ದೇವಳವನ್ನು ನಿರ್ಮಿಸಿದರು.

ಉಳವಿಯ ದೇವಸ್ಥಾನದ ಅಪರೂಪವಾದದ್ದು, ಇಲ್ಲಿಯ ಮುಖ್ಯ ಪ್ರಾಣದೇವ ಬಸವ ಎತ್ತುಕಾಯುವ ಬಸವಣ್ಣ ಎಂದೇ ಬರೆಯಲಾಗಿದೆ. ಈ ಪ್ರದೇಶದಲ್ಲಿ ಚೆನ್ನಬಸವಣ್ಣ ಬೀಡು ಬಿಟ್ಟಾಗ, ವಚನಗಳ ಬಗ್ಗೆ ಅನೇಕ ಕಾರ್ಯಕ್ರಮಗಳು, ಸುಮಾರು 5–10 ಕಿ.ಮೀ.ಗಳ ವ್ಯಾಪ್ತಿಯಲ್ಲಿ ವಿವಿಧ ಗುಹೆಗಳಿಗೆ ಭೇಟಿ ನೀಡಿದ ಬಗ್ಗೆಯೂ ದಾಖಲೆಯಿದೆ.ಅಕ್ಕದ ಗವಿ, ಹರಳಯ್ಯನ ಚಿಲುಮೆ, ಹಳ್ಳದ ಗವಿ, ವಿಭೂತಿ ಕಣಜ, ಆಕಳ ಗವಿ, ಹಾಗೂ ಮಹಾಮನೆ ಗವಿಗಳ ಹೆಸರುಗಳು ಚೆನ್ನಬಸವಣ್ಣ ಹಾಗೂ ಇತರರು ಭೇಟಿ ನೀಡಿದ ಅನಂತರವೇ ನಾಮಕರಣವಾಯಿತು. ಎಂದು ಹೇಳಲಾಗುತ್ತಿದೆ. ಇಂದಿಗೂ ಉಳವಿಗೆ ಬರುವ ಯಾತ್ರಿಕರು ಈ ಎಲ್ಲ ಗವಿಗಳಿಗೆ ಭೇಟಿ ನೀಡುವ ವಾಡಿಕೆಯೂ ಇದೆ.. ರಾಜ್ಯದಿಂದ, ಹೊರರಾಜ್ಯದಿಂದ ಬರುವ ಯಾತ್ರಿಕರು ದಾಸೋಹಕ್ಕಾಗಿ ತಾವು ಬೆಳೆದ ದವಸ ಧಾನ್ಯಗಳನ್ನು, ಬೇಳೆ ಕಾಳುಗಳನ್ನು ನೀಡುವುದು ಮೊದಲಿನಿಂದಲೂ ಬಂದ ಸಂಪ್ರದಾಯವಾಗಿದೆ. ಇದರಿಂದಾಗಿ ಜಾತ್ರೆಯ ಅವಧಿಯಲ್ಲಿ ಪ್ರತಿ ನಿತ್ಯ ದಾಸೋಹ ನಡೆಯುವುದು. ಕಳೆದ ಕೆಲವು ವರ್ಷಗಳಿಂದ ಆಗಮಿಸುವ ಯಾತ್ರಿಕರು ತರುವ ವಾಹನಗಳ ಸಂಖ್ಯೆಯು ಹೆಚ್ಚುತ್ತಿರುವದರಿಂದ ವಾಹನಗಳ ನಿಲುಗಡೆಯ ಸಮಸ್ಯೆ ಜಾತ್ರೆಯ ಸಮಯದಲ್ಲಿ ತೋರುವುದು ಈಗ ಸಾಮಾನ್ಯವಾಗ ತೊಡಗಿದೆ.

**ಪ್ರಕೃತಿಯ ಸೊಬಗಿನಿಂದ ಕೂಡಿರುವ ಜೋಯಿಡಾ ತಾಲೂಕಿನ ಮುಖ್ಯ ಪ್ರವಾಸಿ ತಾಣ**

ಪ್ರಕೃತಿಯ ಸೊಬಗಿನಿಂದ ಕೂಡಿರುವ ಜೋಯಿಡಾ ತಾಲೂಕಿನ ಮುಖ್ಯ ಪ್ರವಾಸಿ ತಾಣವೇ ಉಳವಿ. ಶ್ರೀ ಚೆನ್ನಬಸವೇಶ್ವರ ದೇವಸ್ಥಾನ ಇರುವುದರಿಂದ ಪುಣ್ಯತಾಣವಾಗಿಯೂ ಇದು ಪ್ರಸಿದ್ಧ.ಕಾರವಾರದಿಂದ ಸದಾಶಿವಗಡ, ಕದ್ರಾ, ಅಣಶಿ ಮಾರ್ಗವಾಗಿ ಸುಮಾರು 60 ಕಿ.ಮೀ. ದೂರ ಸಾಗಿದರೆ ಸಿಗುವ ಪವಿತ್ರ ಕ್ಷೇತ್ರವೇ ಉಳವಿ. ಇಲ್ಲಿರುವ ಗುಹೆ, ಪರ್ವತಗಳು ಸಾಹಸಿಗರಿಗೆ ಉಪಯುಕ್ತವಾದಂತವುಗಳು. ಆಕಳ ಗವಿಯ ಸುತ್ತಣದ ಪ್ರದೇಶ ಚಾರಣ ಏರ್ಪಡಿಸಲು ಯೋಗ್ಯವಾಗಿವೆ. ಪ್ರವಾಸೋದ್ಯಮ ಇಲಾಖೆ ಪ್ರವಾಸಿಗರನ್ನು ಆಕರ್ಷಿಸಲು ವಿವಿಧ ರೀತಿಯ ಸಾಹಸ ಶಿಬಿರಗಳನ್ನು ಏರ್ಪಡಿಸಬೇಕಾಗಿದೆ. ಯಾತ್ರಾರ್ಥಿಗಳಿಗೆ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿರುವುದು ಅವಶ್ಯ. ಉಳವಿಯಂತ ಪ್ರದೇಶದಲ್ಲಿ ಇರುವ ಸವಲತ್ತುಗಳನ್ನು ಬಳಸಲು ಸರಕಾರ ಮುಂದಾಗುತ್ತಿಲ್ಲ.

ಕಾರವಾರ–ಜೋಯಿಡಾ ಮಾರ್ಗ ಮಧ್ಯದಲ್ಲಿರುವ ಉಳವಿಗೆ ಹೋಗಿಬರಲು ಬಸ್ ಸೌಕರ್ಯ ಕೂಡ ಬಹಳ ಕಡಿಮೆ. ದಾಂಡೇಲಿ–ಜೋಯಿಡಾ ಮಾರ್ಗವಾಗಿ ಕೂಡ ಉಳವಿಗೆ ಬರಬಹುದಾಗಿದೆ. ಆದರೆ ಈ ಪವಿತ್ರ ಕ್ಷೇತ್ರಕ್ಕೆಂದೇ ವಿಶೇಷ ಬಸ್ ವ್ಯವಸ್ಥೆ ಇದುವರೆಗೂ ಸಾಧ್ಯವಾಗಿಲ್ಲ. ಕಾರವಾರದಿಂದ ಸಾಗುವಾಗ ಅಣಶಿ ರಾಷ್ಟ್ರೀಯ ಉದ್ಯಾನವನ ಪ್ರದೇಶದಲ್ಲಿ ನಿಂತು ಪ್ರಕೃತಿ ಸೌಂದರ್ಯ ಸವಿಯಬಹುದಾಗಿದೆ. ಕದ್ರಾ ಅಣೇಕಟ್ಟೆಯ ಸಂಪೂರ್ಣ ದೃಶ್ಯ ಕಾಣಬಹುದು. ಅತೀ ಎತ್ತರದಲ್ಲಿ ನಿಂತು ಸಹ್ಯಾದ್ರಿಯ ಹಸಿರು ಬನಗಳನ್ನು ನೋಡಬಹುದು. ಸಾಕಷ್ಟು ರಮಣೀಯ ತಾಣಗಳಿದ್ದರೂ ಇದುವರೆಗೆ ಪ್ರಚಾರದ ಕೊರತೆಯಿಂದ ಎಲೆ ಮರೆಯ ಕಾಯಿಯಂತೆ ಉಳಿದುಕೊಂಡಿದೆ ಈ ಪ್ರದೇಶ.

1890 ಚದರ್ ಕಿಲೊ ಮೀಟರ್ ವಿಸ್ತೀರ್ಣದ ಜೋಯಿಡಾ ತಾಲೂಕು ಬಹುತೇಕ ಅರಣ್ಯ ಭಾಗದಿಂದಲೇ ಕೂಡಿದೆ. ಉಳವಿಯಿಂದ ಸುಮಾರು 35 ಕಿ.ಮೀ. ದೂರದಲ್ಲಿರುವ ದಾಂಡೇಲಿ ಸಮೀಪದ ನೇಚರ್ ಕ್ಯಾಂಪ್‌ಗೆ ಸಾಗಿದರೆ ಅರಣ್ಯ ಇಲಾಖೆಯ ವಾಹನದಲ್ಲಿ ಕಾಡನ್ನು ಸುತ್ತುತ್ತಾ ಪ್ರಾಣಿ ಸಂಕುಲಗಳನ್ನು ವೀಕ್ಷಿಸಬಹುದು. ಅಂಬಿಕಾನಗರ ಸಮೀಪದ ಸೈಕ್ಸ್ ಪಾಯಿಂಟ್‌ನಿಂದ ಕಾಣುವ ಕಾಳಿ ಕಣಿವೆಯ ವಿಹಂಗಮ ನೋಟ ಪ್ರವಾಸಿಗರನ್ನು ಮತ್ತೊಮ್ಮೆ ತಿರುಗಿ ನೋಡುವಂತೆ ಮಾಡುತ್ತದೆ. ಎರಡು ಗುಡ್ಡಗಳ ನಡುವೆ ಕಟ್ಟಿರುವ ಅತೀ ಕಡಿಮೆ ದೂರದ ಆಳತೆಯಲ್ಲಿರುವ ಸುಪಾ ಅಣೇಕಟ್ಟು ತನ್ನೊಳಗೆ ತುಂಬಿಕೊಂಡಿರುವ ಜಲ ರಾಶಿಯಿಂದ ನೋಡುಗರನ್ನು ಬೆರಗುಗೊಳಿಸದಿರದು.ಇಂತಹ ನೈಸರ್ಗಿಕ ಸೌಂದರ್ಯಗಳಿಂದ ಕೂಡಿದ ಜೋಯಿಡಾ ತಾಲೂಕಿನ ಉಳವಿಯು ವರ್ಷಂಪ್ರತಿಯಂತೆ ಜಾತ್ರಾ ಮಹೋತ್ಸವದ ಸಡಗರದಲ್ಲಿದೆ. ಲಕ್ಷಾಂತರ ಭಕ್ತಾದಿಗಳು ಈ ಶುಭ ಸಂದರ್ಭಕ್ಕೆ ಸಾಕ್ಷಿಯಾಗಲಿದ್ದಾರೆ.

**ಉಳವಿ ಜಾತ್ರೆಯ ಪ್ರಸಾದ**

**ಉಳವಿ ಜಾತ್ರೆಯ ಪ್ರಸಾದ ವಿಶೇಷವಾದದ್ದು. ಯಾಕೆಂದರೆ ಇದು ತಿನ್ನುವ ಪ್ರಸಾದವಲ್ಲ.**

ಯಾವುದೇ ಜಾತ್ರೆಯಿಂದ ಹಿಂತಿರುಗುವಾಗ ಅಲ್ಲಿನ ವಿಶೇಷ ಪ್ರಸಾದವನ್ನು ತರುವುದು ಭಕ್ತಾದಿಗಳ ಸಂಪ್ರದಾಯ. ಆದರೆ ಉಳವಿ ಜಾತ್ರೆಯ ಪ್ರಸಾದ ವಿಶೇಷವಾದ್ದು. ಯಾಕೆಂದರೆ ಇದು ತಿನ್ನುವ ಪ್ರಸಾದವಲ್ಲ, ಬದಲಾಗಿ ಉಪಯೋಗಿಸಬಹುದಾದ ಮತ್ತು ನೆನಪಿನಲ್ಲಿರುವ ಅರಣ್ಯ ಉತ್ಪನ್ನ. ಜಾತ್ರೆಗೆ ಆಗಮಿಸಿದ ಭಕ್ತಾದಿಗಳು ಅರಣ್ಯ ಉತ್ಪನ್ನ ಒಯ್ಯುವುದು ವಾಡಿಕೆಯಾಗಿತ್ತು. ವರ್ಷ ಕಳೆದಂತೆ ಹೆಚ್ಚಿದ ಭಕ್ತಾದಿಗಳಿಂದ ಅರಣ್ಯ ನಾಶವಾಗುವ ಸಂಭವವಿತ್ತು. ಆದ್ದರಿಂದ ಅರಣ್ಯ ಸಮಿತಿ ಜಾತ್ರಾ ಮಹೋತ್ಸವದಲ್ಲಿ ವಿಶೇಷ ಮಳಿಗೆಯಲ್ಲಿ ಬೆತ್ತದ ಪಿಠೋಪಕರಣಗಳನ್ನು ಮಾರಾಟಮಾಡುತ್ತದೆ. ಇದರಿಂದ ಅರಣ್ಯ ರಕ್ಷಣೆಯ ಜೊತೆಗೆ ಭಕ್ತರ ಸಂಪ್ರದಾಯವೂ ಮುಂದುವರೆದಂತಾಗಿದೆ. ಉಳವಿ ಮಹಾರಥೋತ್ಸವ ಸಂದರ್ಭದಲ್ಲಿ ಅರಣ್ಯ ಪ್ರದೇಶದಲ್ಲಿ ಬೆಂಕಿ ಆಕಸ್ಮಿಕವಾಗದಂತೆ ಅರಣ್ಯ ಇಲಾಖೆ ಹೆಚ್ಚಿನ ಗಮನ ಹರಿಸುತ್ತದೆ.

**ಉತ್ತರ ಕನ್ನಡ ಜಿಲ್ಲೆಯ ಐತಿಹಾಸಿಕ ಸ್ಥಳ**

ಶ್ರೀ ಚೆನ್ನಬಸವಣ್ಣನವರು ಕಲ್ಯಾಣ ನಗರ ತೊರೆದು ಹುಬ್ಬಳ್ಳಿ, ಧಾರವಾಡ, ಯಲ್ಲಾಪುರ ಮಾರ್ಗವಾಗಿ ಸಹ್ಯಾದ್ರಿ ಕಣಿವೆಯಲ್ಲಿರುವ ಉಳವಿಯನ್ನು ಪ್ರವೇಶಿಸಿದರು. ಅಲ್ಲಿಯೇ ನೆಲೆ ನಿಂತು ವಚನ ಸಾಹಿತ್ಯ ಪ್ರಚಾರ ಕೈಗೊಂಡು ಬಸವತತ್ವಗಳ ಜೀವಂತಿಕೆಗೆ ಆಸರೆಯಾದರು. ಶಿವಶರಣರ ಐತಿಹಾಸಿಕ ಪುಣ್ಯ ಕ್ಷೇತ್ರವಾಗಿ ರೂಪುಗೊಂಡಿರುವ ಭಕ್ತಾದಿಗಳನ್ನು ಹೊಂದಿದೆ. ರುದ್ರಾಕ್ಷಿ ಮಂಟಪದಲ್ಲಿ ನೆಲೆ ನಿಂತ ಬಸವಣ್ಣನವರು ಕ್ರಿ.ಶ. 1168 ರಲ್ಲಿ ಲಿಂಗೈಕ್ಯರಾದ ನಂತರ ಸ್ಥಾಪನೆಗೊಂಡ ಉಳವಿ ದೇವಾಲಯ ಕದಂಬರ ಶೈಲಿಯಲ್ಲಿ

ನಿರ್ಮಾಣವಾಗಿದೆ. ಧಾರವಾಡ ಮುರುಘಾಮಠದ ಮೃತ್ಯುಂಜಯ ಸ್ವಾಮೀಜಿ ಈ ಮಠದಲ್ಲಿ ಧಾರ್ಮಿಕ ಕಾರ್ಯ ಪ್ರಾರಂಭಿಸಿದರು. ಪ್ರವಾಸೋದ್ಯಮದಲ್ಲೂ ತನ್ನದೇ ಆದ ಸಿರಿವಂತಿಕೆಯನ್ನು ಹೊಂದಿರುವ ಉಳವಿ ಪ್ರವಾಸಿಗರನ್ನು ಸೆಳೆಯುವಂತ ಆಕರ್ಷಕ ತಾಣಗಳನ್ನು ಹೊಂದಿದೆ.

ಚೆನ್ನಬಸವಣ್ಣನವರ ಪಾದಗಲ ಗುರುತು ಇವೆ ಎಂದು ಹೇಳಲಾಗುವ ರಾಕ್ಷಸಿ ಬೆಟ್ಟ ಉಳವಿಯ ಪ್ರಮುಖ ಪುಣ್ಯ ಸ್ಥಾನಗಳಲ್ಲೊಂದು. ಎತ್ತುಗಳನ್ನು ಕಾಯುವ ಬಸವಣ್ಣ, ರುದ್ರಾಕ್ಷಿ ಮಂಟಪ, ಆಕಳಗವಿ, ಹಳ್ಳದ ಗವಿ, ವಿಭೂತಿ ಕಣಜ, ಪಂಚಲಿಂಗೇಶ್ವರ ಗವಿಗಳು, ಮಹಾಮುನಿಯ ಗವಿ, ಹರಳಯ್ಯನ ಚಿಲುಮೆ ಇತ್ಯಾದಿ ಪ್ರವಾಸಿ ತಾಣಗಳಿವೆ. ಮೂರು ಅಡಿ ಆಳಧಿಂದ ಚಿಮ್ಮುವ ನೀರಿನ ಬುಗ್ಗೆ ಐತಿಹಾಸಿಕ ಹಿನ್ನೆಲೆ ಹೊಂದಿದ್ದು, ಶ್ರೀ ಚೆನ್ನಬಸವಣ್ಣನವರು ಹಸಿವಿನಿಂದ ಬಳಲಿದ ಸಹಚರರಿಗಾಗಿ ಈ ನೀರಿಗೆ ಅಕ್ಕಿ ಎಸೆದಾಗ ಅನ್ನವಾಯಿತು ಎಂಬ ಪ್ರತೀತಿ ಇದೆ. ಸಹ್ಯಾದ್ರಿಯ ಪರ್ವತಗಳ ನಡುವೆ ನೆಲೆ ನಿಂತಿರುವ ಉಳವಿ ಶ್ರೀ ಚೆನ್ನಬಸವೇಶ್ವರ ಜಾತ್ರಾ ಮಹೋತ್ಸವ ಅದ್ದೂರಿಯಿಂದ ಪ್ರಾರಂಭಗೊಂಡಿದೆ. ಲಕ್ಷಾಂತರ ಭಕ್ತಾದಿಗಳು ಆಗಮಿಸಿ ಪುನೀತರಾಗುತ್ತಿದ್ದಾರೆ. ಪ್ರವಾಸೋದ್ಯಮ ಇಲಾಖೆ ಸಹಕಾರದಲ್ಲಿ ಈ ಕ್ಷೇತ್ರ ರಾಷ್ಟ್ರಮಟ್ಟದಲ್ಲಿ ಗುರುತಿಸುವಂತಾಗಲಿ ಎಂಬುದೇ ಎಲ್ಲರ ಆಶಯ.

ಈ ಮೇಲಿನ ವಿವರಗಳನ್ನು ಸಂದರ್ಶನದ ಮೂಲಕ ಮತ್ತು ಸ್ವಂತ ಅವಲೋಕನ ಮೂಲಕ ಮಾಹಿತಿ ಸಂಗ್ರಹ ಮಾಡಲಾಗಿದೆ.

**ಗ್ರಂಥ ಋಣ**


1. .ಸೂರ್ಯನಾಥ ಯು. ಕಾಮತ್(ಸಂ),ಉತ್ತರ ಕನ್ನಡ ಗೆಜೆಟಿಯರ್, ಗವರ್ನ್‌ಮೆಂಟ್ ಆಫ್ ಬೆಂಗಳೂರ್, 1985, ಪು.1–2: ಜೇಮ್ಸ್ ಎಂ.ಕ್ಯಾಂಬೆಲ್ (ಸಂ), ಗೆಜೆಟಿಯರ್ ಆಫ್ ದಿ ಬಾಂಬೆ ಪ್ರೆಸಿಡೆನ್ಸಿ, ವಾಲ್ಯೂಂ ಘಿಗಿ, ಭಾಗ 1, ಕೆನರಾ, ಬಾಂಬೆ, 1883 (ಕರ್ನಾಟಕ ಗೆಜೆಟಿಯರ್ ಇಲಾಖೆ, ಬೆಂಗಳೂರು 2003
2. ಎನ್.ಆರ್.ನಾಯಕ.ಉತ್ತರ ಕನ್ನಡ ಜಿಲ್ಲೆಯ ಗ್ರಾಮ ದೇವತೆಗಳ ಹಾಡುಗಳು, ಜಾನಪದ ಪ್ರಕಾಶನ ಹೊನ್ನಾವರ–2002.
3. ಎನ್.ಆರ್.ನಾಯಕ ಕರಾವಳಿ ಸೋಗುಗಳ ಬಹುರೂಪ,.ಜಾನಪದ ಪ್ರಕಾಶನ ಹೊನ್ನಾವರ–1998
   ಗೋಪಾಲಕೃಷ್ಣ.ಪಿ, ನಾಯಕ (ಸಂ)ಉತ್ತರ ಕನ್ನಡ ದರ್ಶನ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1986,
4. ಗೋಪಾಲ ಕೃಷ್ಣ ಪಿ ನಾಯಕ(ಸಂ)ಉತ್ತರ ಕನ್ನಡದ ಪ್ರೇಕ್ಷಣೀಯ ಸ್ಥಳಗಳು ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ,1998 –
5. ಕೆ.ಮೋಹನ್ .ಕೃಷ್ಣ ರೈ,ಕೆನಾರದ ವಿಭಜನೆ, ಕನ್ನಡ ವಿಶ್ವವಿದ್ಯಾಲಯ ಹಂಪಿ–2010
6. ಸಿ.ಎಸ್.ಶಿವಕುಮಾರಸ್ವಾಮಿ ,(ಸಂ)ಕರ್ನಾಟಕ ಜಾತ್ರೆಗಳು,ಮೈಸೂರ ವಿಶ್ವವಿದ್ಯಾಲಯ –1988
7. ಜಗನ್ನಾಥ ಹೆಬ್ಬಾಳ ಹೈದ್ರಬಾದ ಕರ್ನಾಟಕ ಜಾತ್ರೆಗಳ ಒಂದು ಸಾಂಸ್ಕೃತಿಕ ಅಧ್ಯಯನ ’ – ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು – 2008.